ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೆ, ವಸತಿ ಶಾಲೆಗಳನ್ನು visit ಮಾಡಿ ಕಾರ್ಮಿಕ ಅಧಿಕಾರಿಗಳು ತಪಾಸಣೆ ಮಾಡಿದಾಗ 1745 ಬಾಲ ಕಾರ್ಮಿಕರು ಇದ್ದಾರೆಂದು ಹಾಜರಿ ಪುಸ್ತಕದಲ್ಲಿ ಇದ್ದರೆ, ಅಲ್ಲಿ ನಿಜವಾಗಿ ಇದ್ದದ್ದು 885 ಸಂಖ್ಯೆಯಲ್ಲಿ ಕಂಡು ಬಂದ ಸಂದರ್ಭದಲ್ಲಿ, 6 ವರ್ಷದ ಮಕ್ಕಳಿಗೆ ಅಲ್ಲಿ ಇರಲಿಕ್ಕೆ ಅವಕಾಶ ಇರುವುದಿಲ್ಲ. ಆದರೂ ಕೂಡ ಅಂಥ ಮಕ್ಕಳು ಅಲ್ಲಿ ಕಂಡುಬಂದಿದ್ದು, ಅನಂತರ 9 ವರ್ಷದೊಳಗೆ ಇರಕೂಡದು ಎಂದು ಇರುತ್ತದೆ. ಆದರೂ ಕೂಡ ಹೆಚ್ಚಿನ ವಯಸ್ಸಿನ ಮಕ್ಕಳು ಕೂಡ ಇದ್ದದ್ದು ಕಂಡುಬಂದಿದೆ. ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡುವುದೇನೆಂದರೆ, ಇದರ ಬಗ್ಗೆ ಈಗಾಗಲೇ ಸರ್ಕಾರದ ಮಟ್ಟದಲ್ಲಿ ಆ ಒಂದು ವರದಿ, ಇನ್ನೊಂದು visit ಮಾಡಿ ತಪಾಸಣೆಯನ್ನು ಕಾರ್ಮಿಕ ಅಧಿಕಾರಿಗಳು ಮಾಡಿದ್ದಾರೆ. ಆ ವರದಿ ಇಲ್ಲಿಗೆ ಬಂದು ಕುಳಿತು ಬಹಳ ದಿವಸಗಳಾಯಿತು. ಅದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಬಹಳ ಶಾಲೆಗಳು ಮುಚ್ಚಿದ್ದು ಹಾಗೂ ಮಕ್ಕಳ ಸಂಖ್ಯೆ 1, 2, 3, 4 ಈ ತರಹ ಇದ್ದದ್ದು ಕೂಡ ಆ ವರದಿಯನ್ನು ನಾನು ಇಲ್ಲಿ ತಂದಿದ್ದೇನೆ. ತಾವು ಕೂಡ ಆ ವರದಿಯನ್ನು ತರಿಸಿಕೊಂಡು ಸಮಗ್ರವಾದಂಥ ಮಾಹಿತಿಯನ್ನು ತರಿಸಿಕೊಂಡು ಆ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅದು ಬಹಳ ಸತ್ಯವಾಗಿದೆ. ಬಿಜಾಪುರ ಜಿಲ್ಲೆಯಲ್ಲಿ 40 NCLP ಅಡಿಯಲ್ಲಿ ವಿಶೇಷ ಶಾಲೆಗಳು ನಡೆಯುತ್ತಿವೆ. ಅದರಲ್ಲಿ ಈ ಹಾಜರಾತಿ ಏನಿದೆ, ಸುಮಾರು 2 ಸಾವಿರ ಮಕ್ಕಳು ಅಲ್ಲಿರಬೇಕು. ಆದರೆ ಕೇವಲ 800 ಮಕ್ಕಳನ್ನು ತೋರಿಸಿ 2 ಸಾವಿರ ಮಕ್ಕಳ ಅನುದಾನವನ್ನು ಬಿಡುಗಡೆ ಮಾಡಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ತಾವು ಹೇಳಿದ ಹಾಗೆ ಅಲ್ಲಿ ಒಂದು Committee ಏನಿದೆ, ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ಆ Committee NGO's ಮುಖಾಂತರ ಈ ಶಾಲೆಗಳನ್ನು ನಡೆಸಲಿಕ್ಕೆ NGO's ಗೆ ನೇಮಿಸಲಾಗುತ್ತದೆ. So, NCLP ಎಂದರೆ ಕೇಂದ್ರದಿಂದ ಹಣ ಬರುತ್ತದೆ. SCLP ಎಂದರೆ ರಾಜ್ಯದಿಂದ ಹಣ ಬರುತ್ತದೆ. ಬಿಜಾಪುರದಲ್ಲಿ ಈ 40 ಶಾಲೆಗಳು NCLP ಅಡಿಯಲ್ಲಿ ನಡೆಯುತ್ತಿದೆ. ಈಗಾಗಲೇ ನಮ್ಮ ಅಧಿಕಾರಿಗಳು ಮಾನ್ಯ ಜಿಲ್ಲಾಧಿಕಾರಿಗಳವರಿಗೆ ನಾವು ದೂರನ್ನು ಕೊಟ್ಟು ಕ್ರಮ ತೆಗೆದುಕೊಳ್ಳಲಿಕ್ಕೆ ಮುಂದಾಗುತ್ತೇವೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಸದನದ ಮೂಲಕ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ವಿಷಯ: ಉಡುಪಿ ಜಿಲ್ಲೆ ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಪ್ರಾರಂಭಿಸುವುದು.

36 (209) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಕಂಬದ ಕೋಣೆ ಗ್ರಾಮದಲ್ಲಿ ಮಂಜೂರಾದ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಈ ತನಕವೂ ಕಾರ್ಯಾರಂಭಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿಳಂಬವಾಗಲು ಕಾರಣಗಳೇನು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಯಾವುದೇ ವಸತಿ ಶಾಲೆ ಮಂಜೂರಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ಗೋಪಾಲ ಪೂಜಾರಿ :– ಮಾನ್ಯ ಅಧ್ಯಕ್ಷರೆ, ಈ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ ನನ್ನ ಕ್ಷೇತ್ರದಲ್ಲಿ ಹಿಂದಿನ ಸರ್ಕಾರ ಅಂದರೆ ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರ ಇದ್ದಾಗ, ಆ ಸಂದರ್ಭದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಸಮಾಜ ಕಲ್ಯಾಣ ಸಚಿವರಾಗಿದ್ದಾಗ ಅನುಮತಿಯನ್ನು ಕೊಟ್ಟಿದ್ದರು. ಜಾಗ ಸಹ ಇಲಾಖೆಗೆ ಹಸ್ತಾಂತರವಾಗಿದೆ. ಆ ಶಾಲೆ ಪ್ರಾರಂಭವಾಗುವ ಹಂತದಲ್ಲಿ ಚುನಾವಣೆ ಘೋಷಣೆಯಾಯಿತು. ಚುನಾವಣೆ ಆದ ನಂತರ ಬಂದಂಥ ಸರ್ಕಾರದಿಂದ ಈ ಶಾಲೆ ಅನುಷ್ಠಾನವಾಗಲಿಲ್ಲ ಅದೇ ಇಲಾಖೆಯವರು 'ಅನುಮತಿ ಆಗಿಲ್ಲ' ಎನ್ನುವ ಉತ್ತರವನ್ನು ಈಗ ಕೊಟ್ಟಿದ್ದಾರೆ. ನನಗೆ ಇದರ ಬಗ್ಗೆ ಒಂದು ಸರಿಯಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ :– ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದಂಥ ಮಾನ್ಯ ಗೋಪಾಲ ಪೂಜಾರಿಯವರಿಗೆ ತಿಳಿಸಬಯಸುವುದೇನೆಂದರೆ, ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಯಾವುದೂ ವಸತಿ ಶಾಲೆ ಮಂಜೂರು ಆಗಿರುವುದಿಲ್ಲ. ಏಕೆಂದರೆ, ಅವರು ಹೇಳಿರುವಂತೆ ಸನ್ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರದಲ್ಲಿ ಈ ತರಹ ಮಂಜೂರು ಆಗಿದೆ ಎಂದು ಹೇಳಿದರು. ಆ ತರಹ ಪ್ರಸ್ತಾವನೆ ಆಗಿದೆಯೇ ಎಂದು ನಾನು ಈಗಾಗಲೇ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದ್ದೇನೆ. ಯಾವುದೇ ಪ್ರಸ್ತಾವ ನಮ್ಮ ಸರ್ಕಾರದ ಮುಂದಿಲ್ಲ. ಅದಕ್ಕೆ ಅವರು ವಿಳಂಬವಾಗಲು ಕಾರಣವೇನೆಂದು ಕೇಳಿದರು. ಪ್ರಸ್ತಾವ ನಮ್ಮ ಸರ್ಕಾರದ ಮುಂದೆ ಇರದ ಕಾರಣ ವಿಳಂಬವಾಗುವ ಪ್ರಶ್ನೆಯೇ ಬರುವುದಿಲ್ಲ. ಏಕೆಂದರೆ ಅವರಿಗೆ ಅನುಮತಿ ಯಾವುದೂ ಸಿಕ್ಕಿಲ್ಲ. ದಯಮಾಡಿ ತಾವು ಇನ್ನೊಂದು ಸಲ ಕಾಗದ ಪತ್ರಗಳನ್ನು ನೋಡಿದರೆ ಒಳ್ಳೆಯದೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಗೋಪಾಲ ಪೂಜಾರಿ :– ಮಾನ್ಯ ಅಧ್ಯಕ್ಷರೆ, ಇಲಾಖೆಯ ಅಧಿಕಾರಿಗಳ ಜೊತೆ ನೀವು ಸರಿಯಾಗಿ ಚರ್ಚೆ ಮಾಡಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಸಮಾಜ ಕಲ್ಯಾಣ ಸಚಿವರಾಗಿದ್ದಾಗ ನನ್ನ ಕ್ಷೇತ್ರಕ್ಕೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಹೇರೂರು ಗ್ರಾಮಕ್ಕೆ sanction ಆಗಿದೆ. ಜಾಗವನ್ನು ಕೊಟ್ಟಿದ್ದೇವೆ. Theatre ಅನ್ನು ಬಾಡಿಗೆಗೆ ತೆಗೆದುಕೊಳ್ಳಲಿಕ್ಕೆ ಇಲಾಖೆಯವರೊಂದಿಗೆ ಚರ್ಚೆ ಮಾಡಿದ್ದೇವೆ. ಅದೇ ಅಧಿಕಾರಿಗಳು ಇವತ್ತು ಅನುಮತಿ ಆಗಿಲ್ಲವೆಂದು ಹೇಳಿದರೆ ಒಂದು ಸರ್ಕಾರ ಹೋದ ತಕ್ಷಣ sanction ಆದ ಕಾರ್ಯಕ್ರಮವನ್ನು ತೆಗೆದುಹಾಕುತ್ತಾರೆಂದರೆ ಇದರ ಅರ್ಥವೇನು? ನಾನು ಹೇಳುವುದಿಷ್ಟೆ. ಅದೇನೆಂದರೆ, sanction ಆಗಿರುವ copy ಇಲಾಖೆಯಲ್ಲಿ ಇದೆಯೋ ಅಥವಾ ಇಲ್ಲವೇ ಎಂದು ಕೇಳಿ. ಇಲ್ಲದಿದ್ದರೆ ಆ copy ಯನ್ನು ನಾನು ತರಿಸಿಕೊಡುತ್ತೇನೆ. ಹಾಗಾಗಿ ನೀವು ಯಾವಾಗ ಅನುಮತಿಯನ್ನು ಕೊಡುತ್ತೀರಿ? ಯಾವಾಗ ವಸತಿ ಶಾಲೆಯನ್ನು ಪ್ರಾರಂಭ ಮಾಡುತ್ತೀರಿ? ಎನ್ನುವ ಬಗ್ಗೆ ನನಗೆ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ :– ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯಿಂದ ಅನುಮತಿ ಇದೆ ಎಂದು ಮಾನ್ಯ ಹಿರಿಯ ಸದಸ್ಯರು ಹೇಳಿದರು. ಮಾನ್ಯ ಸದಸ್ಯರಿಗೆ ಇವತ್ತು ನಾನೊಂದು ಸಲಹೆ ಮಾಡುತ್ತೇನೆ. ನಮ್ಮ ಇಲಾಖೆಯ ಅಧಿಕಾರಿಗಳನ್ನು, ಮಾನ್ಯ ಶಾಸಕರನ್ನು ನನ್ನ ಕಛೇರಿಗೆ ಕರೆಸಿ ಚರ್ಚೆ ಮಾಡುತ್ತೇನೆ. ಚರ್ಚೆ ಮಾಡಿದಾಗ ಅಕಸ್ಮಾತ್ ಅನುಮತಿ ಇತ್ತು ಎಂದರೆ ಅವರಿಗೆ permission ಕೊಡುತ್ತೇವೆ. ಅನುಮತಿ ಇಲ್ಲ ಎಂದರೆ ಅವರು ಅದಕ್ಕೆ ಒಂದು ಪತ್ರ ಕೊಡಲಿ, ನಂತರ ಪರಿಶೀಲನೆ ಮಾಡಿ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ: ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಹಾಗೂ ಪಶುವೀರ್ಯಾಣು ಕೊರತೆಯನ್ನು ನೀಗಿಸುವುದು.

37 (166) ಶ್ರೀ ಕೃಷ್ಣಬೈರೇಗೌಡ ಸಿ.ಬಿ. (ವೇಮಗಲ್) : ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ವ್ಯಂದವಾರು ಮಂಜೂರಾದ ಹುದ್ದೆಗಳೆಷ್ಟು ಹಾಗೂ ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು;

ಆ) ಈ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಏನು ಕ್ರಮಕ್ಕೆಗೊಂಡಿದೆ; (ವಿವರ ನೀಡುವುದು ಹಾಗೂ ಜಿಲ್ಲಾವಾರು ಅದರಲ್ಲೂ ಮುಖ್ಯವಾಗಿ ಕೋಲಾರ ಜಿಲ್ಲೆಯ ಮಾಹಿತಿಯನ್ನು ಪ್ರತ್ಯೇಕವಾಗಿ ನೀಡುವುದು);

ಇ) ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಕೋಲಾರ ಜಿಲ್ಲೆಯಲ್ಲಿ ಪಶು ವೀರ್ಯಾಣು (ಸೆಮೆನ್) ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಹೈನುಗಾರಿಕೆಗೆ ಅತ್ಯಂತ ಅವಶ್ಯವಾದ ಪಶುವೀರ್ಯಾಣು (ಸೆಮೆನ್) ವನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಲು ವಿಫಲವಾಗಿರುವುದಕ್ಕೆ ಕಾರಣಗಳೇನು?

ಡಾ: ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಮತ್ತು ಪಶುಸಂಗೋಪನೆ ಸಚಿವರು)

ಅ) ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ವ್ಯಂದವಾರು ಮಂಜೂರಾದ ಹುದ್ದೆಗಳು ಹಾಗೂ ಇವುಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ 1–ರಲ್ಲಿ ನೀಡಲಾಗಿದೆ.

ಆ) ಕೋಲಾರ ಜಿಲ್ಲೆಯಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ವ್ಯಂದವಾರು ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಹುದ್ದೆಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಏಳು ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ.

577 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಅನುಮೋದನೆ ನೀಡಿದೆ. ಆಯ್ಕೆ ಮಾಡಲಾದ 250 ಪಶುವೈದ್ಯಾಧಿಕಾರಿಗಳ ಅಂತಿಮ ಪಟ್ಟಿಯನ್ನು ದಿನಾಂಕ: 10–3–2006 ರಂದು ಪ್ರಕಟಿಸಿದೆ. ಉಳಿದ 327 ಪಶುವೈದ್ಯಾಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.